ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಸಂಖ್ಯೆ: ಅಪ್ರಮುಅಸಂ(ಅಸಂನಿ)ಬಿ3/ಬೊಂಬು.ದರ ನಿಗದಿ.
ಸಿಆರ್-02/2015-16/65

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು, ದಿನಾಂಕ: 08 .05.2017.

## ಅಧಿಕೃತ ಜ್ಞಾಪನ

ವಿಷಯ: 2017-18ನೇ ಸಾಲಿಗೆ ಬೊಂಬುಗಳ ಚಿಲ್ಲರೆ ಮಾರಟ ದರವನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ:
1. ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಅಪ್ರಮುಅಸಂ(ಅಸಂನಿ)ಬಿ3/ ಬೊಂಬು.ದರ ನಿಗದಿ/ಸಿಆರ್-02/2015-16, ದಿನಾಂಕ 31.05.2016.
2. ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿ1/ಬಿಯುಡಿ ಎಸ್‌ಎಸ್‌ಆರ್/ಡಿಎಸ್/ಸಿಆರ್-27/2016-17,ದಿನಾಂಕ 10.04.2017.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ, ಶಿರಸಿ ಇವರ ಪತ್ರ ಸಂಖ್ಯೆ : ಬಿ2.ಜಿಎಫ್ಎಲ್.ಸಿಆರ್-46/2011-12, ದಿನಾಂಕ 20.04.2017.

88/10/5/17

* * * * *

ಈ ಕಛೇರಿಯ ಉಲ್ಲೇಖ (1) ಅಧಿಕೃತ ಜ್ಞಾಪನಾ ಪತ್ರದಲ್ಲಿ ದಿನಾಂಕ 25.05.2016 ರಿಂದ ಜಾರಿಗೆ ಬರುವಂತೆ ಮೇದಾರ ಮೇದಾರ ಹಾಗೂ ಮೇದಾರೇತರರಿಗೆ ಬೊಂಬು ಮರಾಟ ಮಾಡುವ ದರಗಳನ್ನು ನಿಗಧಿಪಡಿಸಲಾಗಿತ್ತು. ಈ ಕಛೇರಿಯ ಉಲ್ಲೇಖ(2)ರ ಅಧಿಕೃತ ಜ್ಞಾಪನ ಪತ್ರದಲ್ಲಿ 2016-17ರ ಸಾಲಿಗೆ ಎಸ್.ಎಸ್.ಆರ್ ದರಗಳನ್ನು ದಿನಾಂಕ 01.04.2017 ರಿಂದ ಜಾರಿಗೆ ಬರುವಂತೆ ಹೆಚ್ಚಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ, ಶಿರಸಿ ಇವರು ಪರಿಷ್ಕೃತ ಎಸ್.ಎಸ್.ಆರ್. ಹಾಗೂ ಸೀನಿಯರೇಜ್ ದರಗಳಂತೆ ಬೊಂಬು ತಯಾರಿಕೆ ಹಾಗೂ ಸಾಗಾಟ ಇತ್ಯಾದಿ ಕುರಿತು ಡಾಟಾ ಶೀಟ್ ತಯಾರಿಸಿ, ವಿವಿಧ ತೆರಿಗೆಗಳನ್ನು ಹೊರತು ಪಡಿಸಿ ಮೇದಾರರಿಗೆ ಹಾಗೂ ಮೇದಾರೇತರರಿಗೆ ಈ ಕೆಳಕಂಡಂತೆ ದರಗಳನ್ನು ನಿಗದಿಪಡಿಸಲು ಉಲ್ಲೇಖ (3)ರ ಪತ್ರದಲ್ಲಿ ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ವಿವರ | ಮೇದಾರರಿಗೆ ನಿಗದಿಪಡಿಸಿದ ದರ ಪ್ರತಿ 100 ಬೊಂಬುಗಳಿಗೆ (ಎಲ್ಲಾ ತೆರಿಗಳನ್ನು ಹೊರತುಪಡಿಸಿ) ರೂ.ಗಳಲ್ಲಿ) | | ಮೇದಾರೇತರರಿಗೆ ನಿಗದಿಪಡಿಸಿದ ದರ ಪ್ರತಿ 100 ಬೊಂಬುಗಳಿಗೆ (ಎಲ್ಲಾ ತೆರಿಗೆಗಳನ್ನು ಹೊರತುಪಡಿಸಿ) ರೂ.ಗಳಲ್ಲಿ) | |
|---|---|---|---|---|---|
| | | ಚಾಲ್ತಿಯಲ್ಲಿರುವ ದರ | ಪ್ರಸ್ತಾಪಿತ ದರ | ಚಾಲ್ತಿಯಲ್ಲಿರುವ ದರ | ಪ್ರಸ್ತಾಪಿತ ದರ |
| 1 | ಡೌಗಾ (ದೊಡ್ಡ) ಬೊಂಬು 18 ಅಡಿಗಿಂತ ಹೆಚ್ಚಿನ ಉದ್ದ | 4695.00 | 4923.00 | 4906.00 | 5134.00 |
| 2 | ಡೌಗಾ (ದೊಡ್ಡ) ಬೊಂಬು 12 ಅಡಿಯಿಂದ 18 ಅಡಿಯವರೆಗೆ | 3705.00 | 3882.00 | 3916.00 | 4093.00 |

| | | | | | |
|---|---|---|---|---|---|
| 3 | ಸಣ್ಣ ಬೊಂಬು 18 ಅಡಿಗಿಂತ ಹೆಚ್ಚಿನ ಉದ್ದ | 2357.00 | 2462.00 | 2621.00 | 2726.00 |
| 4 | ಸಣ್ಣ ಬೊಂಬು 12 ಅಡಿಯಿಂದ 18 ಅಡಿಯವರೆಗೆ | 2156.00 | 2252.00 | 2420.00 | 2516.00 |

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ, ಶಿರಸಿ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಅಪಜೀ 102 ಅಪಸೇ 99, ದಿನಾಂಕ 04.09.2003ರ ವಿತ್ತಾಧಿಕಾರ ಸಂಖ್ಯೆ (18)ರಲ್ಲಿ ಈ ಕೆಳಸಹಿದಾರರಿಗೆ ಪ್ರದತ್ತವಾದ ವಿತ್ತಾಧಿಕಾರ ಚಲಾಯಿಸಿ ಬೊಂಬುಗಳಿಗೆ ಚಿಲ್ಲರೆ ಮಾರಾಟ ದರಗಳನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ದಿನಾಂಕ 12.05.2017ರಿಂದ ಜಾರಿಗೆ ಬರುವಂತೆ ನಿಗದಿಪಡಿಸಿ ಆದೇಶಿಸಿದೆ.

| ಕ್ರಮ ಸಂಖ್ಯೆ | ವಿವರ | **ಮೇದಾರರಿಗೆ** ನಿಗದಿಪಡಿಸಿದ ದರ ಪ್ರತಿ 100 ಬೊಂಬುಗಳಿಗೆ (ಎಲ್ಲಾ ತೆರಿಗಳನ್ನು ಹೊರತುಪಡಿಸಿ) ರೂ.ಗಳಲ್ಲಿ) | **ಮೇದಾರೇತರರಿಗೆ** ನಿಗದಿಪಡಿಸಿದ ದರ ಪ್ರತಿ 100 ಬೊಂಬುಗಳಿಗೆ (ಎಲ್ಲಾ ತೆರಿಗೆಗಳನ್ನು ಹೊರತುಪಡಿಸಿ) ರೂ.ಗಳಲ್ಲಿ) |
|---|---|---|---|
| 1 | ಡೌಗಾ (ದೊಡ್ಡ) ಬೊಂಬು 18 ಅಡಿಗಿಂತ ಹೆಚ್ಚಿನ ಉದ್ದ | 4923.00 | 5134.00 |
| 2 | ಡೌಗಾ (ದೊಡ್ಡ) ಬೊಂಬು 12 ಅಡಿಯಿಂದ 18 ಅಡಿಯವರೆಗೆ | 3882.00 | 4093.00 |
| 3 | ಸಣ್ಣ ಬೊಂಬು 18 ಅಡಿಗಿಂತ ಹೆಚ್ಚಿನ ಉದ್ದ | 2462.00 | 2726.00 |
| 4 | ಸಣ್ಣ ಬೊಂಬು 12 ಅಡಿಯಿಂದ 18 ಅಡಿಯವರೆಗೆ | 2252.00 | 2516.00 |

<u>ಷರತ್ತುಗಳು:</u>

1. ಅರಣ್ಯ ಪ್ರದೇಶದಲ್ಲಿ ಬೊಂಬು ತಯಾರಿಕೆ ಕಾಮಗಾರಿ ಮತ್ತು ಮಾರಾಟದರದ ವ್ಯತ್ಯಾಸದಿಂದ ಉಂಟಾಗಬಹುದಾದ ನಷ್ಟವನ್ನು ಗಮನದಲ್ಲಿಟ್ಟುಕೊಂಡು ಬೊಂಬು ತಯಾರಿಕೆ ಕಾಮಗಾರಿ ದರಗಳನ್ನು ಸೂಕ್ತವಾಗಿ ಮಂಜೂರು ಮಾಡುವುದು.
2. ಏಜೆನ್ಸಿಗಳಿಗೆ ಮಂಜೂರು ಮಾಡುವಾಗ ನಿರ್ವಹಣಾ ದರಗಳಲ್ಲಿ ಮೇಲುಸ್ತುವಾರಿ ವೆಚ್ಚ ಮತ್ತು ಇತರೆ ವೆಚ್ಚಗಳನ್ನು ನಿಗದಿ ಮಾಡುವ ವಿಷಯದಲ್ಲಿ ಸರ್ಕಾರಿ ಆದೇಶಗಳನ್ನು ಪಾಲಿಸತಕ್ಕದ್ದು. ಮೇಲುಸ್ತುವಾರಿ ವೆಚ್ಚಗಳು ಸರ್ಕಾರಿ ಆದೇಶ ಸಂಖ್ಯೆ: ಅಪಜೀ 53 ಎಫ್ಎಡಿ 2005, ದಿನಾಂಕ 16.06.2007ರ ಪ್ರಕಾರ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತರವರಿಗೆ ಮಾತ್ರ ಅನ್ವಯಿಸತಕ್ಕದ್ದು.

3. ಡಿಪೋ ನಿರ್ವಹಣೆಯಲ್ಲಿ ಸೂಕ್ತ ನಿಗಾ ವಹಿಸುವುದು. ಮತ್ತು ಅಲ್ಲಿ ಯಾವುದೇ ತಕರಾರುಗಳು ಆಗದಂತೆ ನೋಡಿಕೊಳ್ಳತಕ್ಕದ್ದು.
4. ಬೊಂಬು ಸರಬರಾಜು ಮಾಡುವ ಮೊದಲು 2017-18ನೇ ಸಾಲಿಗೆ ನಿಗಧಿಪಡಿಸಿದ ಮಾರಾಟದರ ಮತ್ತು ಅನ್ವಯಿಸುವ ಎಲ್ಲಾ ತೆರಿಗೆಗಳನ್ನು ಪಾವತಿಸಿಕೊಳ್ಳತಕ್ಕದ್ದು.

8/5/17

(ಕೆ.ಎಸ್. ಸುಗಾರ, ಭಾಅಸೇ)
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

ಪ್ರತಿಯನ್ನು :

1. ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಹಾಲೇಖಪಾಲರು, (ಆಡಿಟ್-1 ಮತ್ತುಅಕೌಂಟ್ಸ್), ಕರ್ನಾಟಕ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.